ಅಧ್ಯಕ್ಷರು: ವಿವರಗಳು ಬರಲಿ, ಆನಂತರ ತೆಗೆದುಕೊಳ್ಳೋಣ. ಎರಡು ಮೂರು ದಿವಸಗಳಲ್ಲಿ ವಿವರ ತರಿಸುತ್ತೇನೆಂದು ಹೇಳಿದ್ದಾರೆ. ಒಂದು ವಾರ ಸಮಯ ಕೊಡೋಣ. If we get the details, we can think of the rest.

ಶ್ರೀ ಎನ್.ಯೋಗೀಶ್ ಭಟ್: ವರಾಹಿ ಜಲವಿದ್ಯುತ್ ಯೋಜನಾ ಅವಧಿಗೆ ಎಷ್ಟು ಜನರೇಟರ್‌ಗಳು ಕೆಲಸ ಮಾಡುತ್ತಿವೆ, ಎಷ್ಟು ಹಾಳಾಗಿವೆ? ಆಗಾಗ ವೈಫಲ್ಯವಾಗಲು ಕಾರಣವೇನು?

MR. SPEAKER: It is a different question. You will have to give notice. ಅಲ್ಲವೆ? ಮಂತ್ರಿಗಳು ಅಂದರೆ ಅವರೇನು ದೇವಲೋಕದಿಂದ ಬಂದಿರುತ್ತಾರೆಯೇ ಎಲ್ಲಾ ಮಾಹಿತಿ ಅವರಲ್ಲಿ ಎಲ್ಲಿರುತ್ತದೆ?

ಶ್ರೀ ಎನ್.ಯೋಗೀಶ್ ಭಟ್: ಉತ್ತರ ಕೊಡಬಹುದೆಂದು ನಿರೀಕ್ಷೆ ಮಾಡುತ್ತೇವೆ.

ಅಧ್ಯಕ್ಷರು: ಕೇಳಿದ್ದಕ್ಕೆ ಮಾಹಿತಿ ಪೂರ್ಣ ಇರುವುದಿಲ್ಲ. ಇದು ಹೊಸ ವಿಚಾರ. ತಾವು ನೋಟೀಸ್ ಕೊಡಿ ಉತ್ತರ ತರಿಸಿಕೊಡುತ್ತಾರೆ.

ಶ್ರೀ ಕುಂಬ್ಳೆ ಸುಂದರ್‌ರಾವ್: ಮಾನ್ಯ ಅಧ್ಯಕ್ಷರೆ, ವರಾಹಿ ಯೋಜನೆಗೆ ಸಂಬಂಧಪಟ್ಟ ಪ್ರದೇಶಗಳ ಜನರಿಗೆ ಏನು ಅನ್ಯಾಯವಾಗಿದೆ ಅದೇ ಅನ್ಯಾಯ ಎಂ.ಆರ್.ಪಿ.ಎಲ್. ಯೋಜನೆಯ ಪ್ರದೇಶದ ಜನರಿಗೆ ಆಗಿದೆ. ಆ ಪ್ರದೇಶದಲ್ಲಿ ಇಂಜಿನಿಯರ್ ಪದವಿಯಾದವರು ಇದ್ದರೂ ಅವರನ್ನು ಬಿಟ್ಟು ಎಂ.ಆರ್.ಪಿ.ಎಲ್. ಕಂಪನಿಯವರು ಉತ್ತರಭಾರತದಿಂದ ಜನರನ್ನು ಕರೆಸಿ ತುಂಬುತ್ತಿದ್ದಾರೆ.

ಅಧ್ಯಕ್ಷರು: ಎಂ.ಆರ್.ಪಿ.ಎಲ್.ವಿಚಾರ ಅದು ಬೃಹತ್ ಕೈಗಾರಿಕೆಗೆ ಸಂಬಂಧಪಟ್ಟಿದ್ದು. ವರಾಹಿ ಪವರ್ ಮಿನಿಸ್ಟರ್‌ಗೆ ಸಂಬಂಧಪಟ್ಟಿದ್ದು. ತಾವು ಬೃಹತ್ ಕೈಗಾರಿಕಾ ಸಚಿವರಿಗೆ ಪ್ರಶ್ನೆ ಕಳುಹಿಸಿದರೆ ಉತ್ತರ ತರಿಸಿಕೊಡುತ್ತಾರೆ.

ಪೊಲೀಸ್ ಕಾನ್ಸ್‌ಟೇಬಲ್‌ಗಳಿಗೆ ಪಡಿತರ ಸೌಲಭ್ಯ

10 (52)

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ (ಚಾಮರಾಜ): ಮಾನ್ಯ ಗೃಹ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೊಲೀಸ್ ಕಾನ್ಸ್‌ಟೇಬಲ್‌ರವರುಗಳಿಗೆ ನೀಡಲಾಗುತ್ತಿದ್ದ ಉಚಿತ ಪಡಿತರವನ್ನು ಸರ್ಕಾರ ನಿಲ್ಲಿಸಿರುವುದು ನಿಜವೇ? ಇದಕ್ಕೆ ಕಾರಣಗಳೇನು?

ಆ) ಇದನ್ನು ಪಡೆಯುತ್ತಿದ್ದ ಎಷ್ಟು ಜನರಿಗೆ ವಿತರಿಸಲಾಗುತ್ತಿತ್ತು ಹಾಗೂ ತಗಲುತ್ತಿದ್ದ ವೆಚ್ಚ ಎಷ್ಟು?

ಇ) ಈ ಯೋಜನೆಯನ್ನು ಮತ್ತೆ ಜಾರಿಗೊಳಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೆ?

ಶ್ರೀ ಆರ್.ರೋಶನ್ ಬೇಗ್ (ಗೃಹ ರಾಜ್ಯ ಮಂತ್ರಿಗಳು):

ಅ) ಕೇಂದ್ರ ಸರ್ಕಾರದಿಂದ ಸಮರ್ಪಕವಾದ ರೀತಿಯಲ್ಲಿ ಪಡಿತರವನ್ನು ಬಿಡುಗಡೆ ಮಾಡದೇ ಇದ್ದದ್ದರಿಂದ, ಪೊಲೀಸ್ ಕಾನ್ಸ್‌ಟೇಬಲ್‌ರವರುಗಳಿಗೆ ನೀಡಲಾಗುತ್ತಿದ್ದ ಉಚಿತ ಪಡಿತರವನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿತ್ತು.

ಆ) ಈ ಸೌಲಭ್ಯ ಕರ್ನಾಟಕ ರಾಜ್ಯದ ಪೊಲೀಸ್ ಸಿಬ್ಬಂದಿಗಳಾದ ಅನುಯಾಯಿ 1217, ಪಿಸಿ:ಎ.ಪಿ.ಸಿ.43544, ಹೆಚ್‌ಸಿ:ಎಹೆಚ್‌ಸಿ 13465 ಎಎಸ್‌ಐ:ಎಆರ್‌ಎಸ್‌ಐ 2874, ಪಿಎಸ್‌ಐ:ಎಆರ್‌ಎಸ್‌ಐ 2582 ದರ್ಜೆಯವರೆಗಿನ ಪೊಲೀಸ್ ಸಿಬ್ಬಂದಿಗಳಿಗೆ ದೊರೆಯುತ್ತಿದೆ. 1997-98ನೇ ಆರ್ಥಿಕ ಸಾಲಿಗೆ ಸುಮಾರು ರೂ.6,61,50,000-00ಗಳ ಅನುದಾನ ಕಾಯ್ದಿರಿಸಲಾಗಿದೆ. ಇದರಲ್ಲಿ ಈವರೆವಿಗೆ ಸುಮಾರು ರೂ.2,66,46,301-00ನ್ನು ವೆಚ್ಚ ಮಾಡಲಾಗಿದೆ.

ಇ) ಹೌದು, ಆಯುಕ್ತರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಬೆಂಗಳೂರುರವರು ತಮ್ಮ ಅಧಿಕೃತ ಜ್ಞಾಪನ ಪತ್ರ ದಿನಾಂಕ 31-1-98ರಲ್ಲಿ ಕೇಂದ್ರ ಸರ್ಕಾರದಿಂದ 1998ನೇ ಫೆಬ್ರವರಿ ಮಾಹೆಗೆ ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ಅಕ್ಕಿ ಮತ್ತು ಗೋಧಿಯನ್ನು ಬಿಡುಗಡೆ ಮಾಡಿದ್ದು ಈಗಾಗಲೇ ಪೊಲೀಸ್ ಸಿಬ್ಬಂದಿಗಳು 1998ನೇ ಫೆಬ್ರವರಿ ತಿಂಗಳಿಂದ ಉಚಿತ ಪಡಿತರವನ್ನು ಪಡೆಯುತ್ತಿದ್ದಾರೆ.

ಶ್ರೀ ಎಚ್.ಎನ್.ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ಈ ರಾಜ್ಯದಲ್ಲಿ ಕಾನೂನು ವ್ಯವಸ್ಥೆಗೆ ಪೂರಕವಾಗಿರತಕ್ಕ ಪೊಲೀಸ್ ಪೇದೆ ಮತ್ತು ಅವರ ಕುಟುಂಬ ವರ್ಗದವರ ಹೊಟ್ಟೆಯ ಮೇಲೆ ತಣ್ಣೀರು ಬಟ್ಟೆಯನ್ನು ಹಾಕಿ ಚುನಾವಣೆಯ ಪೂರ್ವ ಭಾವಿಯಾಗಿ ಅವರಿಗೆ ಪಡಿತರ ವ್ಯವಸ್ಥೆಯನ್ನು ಜಾರಿ ಮಾಡಿ ಅವರಿಗೆ ಕೊಡತಕ್ಕ ಕೆಲಸ ಮಾಡಿರತಕ್ಕದ್ದು ಇದು ನಿಜಕ್ಕೂ ಕೂಡ ತಪ್ಪು. ಎಷ್ಟೋ ಕುಟುಂಬವರ್ಗದವರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪ್ರಸಂಗ ಒದಗಿದೆ. ಅವರ ಕುಟುಂಬ ನಿರ್ವಹಣೆಯನ್ನು ನಿಭಾಯಿಸಲಿಕ್ಕೆ ಆಗದೆ ಅನೇಕ ಜನ ಬೇಸತ್ತಿದ್ದಾರೆ. ಬಡ ಪೊಲೀಸ್ ಪೇದೆ ಕುಟುಂಬದವರು ಇವತ್ತಿನ ದಿವಸ ಸರಿಯಾದ ರೀತಿಯಲ್ಲಿ ಜೀವನ ಮಾಡಲಿಕ್ಕೆ ಆಗುತ್ತಿಲ್ಲ. ಅವರಿಗೆ ಆಹಾರಪದಾರ್ಥಗಳನ್ನು ಒದಗಿಸಿ ಕೊಡುತ್ತಿಲ್ಲ. ಅವರು ಕೊಡತಕ್ಕ ಆಹಾರಪದಾರ್ಥಗಳು ಮನುಷ್ಯರು ತಿನ್ನುವುದಕ್ಕೆ ಯೋಗ್ಯವಲ್ಲ. ಪಡಿತರ

ವ್ಯವಸ್ಥೆಯಲ್ಲಿ ಇವರು ಕೊಡತಕ್ಕ ಅಕ್ಕಿ ಗೋಧಿ ಕೆಟ್ಟ ಕಲ್ಪನೆ ಮಾಡಲಿಕ್ಕೂ ಸಾಧ್ಯವಿಲ್ಲ. ಅದೊಂದು ವಿಷಪೂರಿತವಾಗಿರತಕ್ಕ ಪದಾರ್ಥಗಳು ಬಂದಿದೆ. ಇದಕ್ಕೆ ಏನು ಹೇಳುತ್ತೀರಿ?

ಶ್ರೀ ಆರ್.ರೋಷನ್ ಬೇಗ್: ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿರುವ ಪೊಲೀಸ್ ಪೇದೆ ಅಸಿಸ್ಟೆಂಟ್ ಸಬ್ ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್, ಹೆಡ್ ಕಾನ್‌ಸ್ಟೇಬಲ್ ಇವರುಗಳಿಗೆ ತಿಂಗಳಿಗೆ 10 ಕೆ.ಜಿ. ಅಕ್ಕಿ 5 ಕೆ.ಜಿ. ಗೋಧಿ, 2 ಕೆ.ಜಿ ಸಕ್ಕರೆಯನ್ನು ಪಡಿತರ ವ್ಯವಸ್ಥೆಯ ಮೂಲಕ ಕೊಡುತ್ತಿದ್ದುದು ನಿಜ. ಕೇಂದ್ರಸರ್ಕಾರದ ಸಪ್ಲೈ ಸರಿಯಾಗಿಲ್ಲದ ಕಾರಣ ಅದನ್ನು ನಿಲ್ಲಿಸಲಾಗಿತ್ತು. ಈಗ ಪುನಃ ಕೊಡಲಾಗುತ್ತಿದೆ.

ಅಧ್ಯಕ್ಷರು: ಈಗ ರೀ ಇಂಟರ್‌ಡ್ಯೂಸ್ ಮಾಡಿದ್ದಾರೆ.

ಶ್ರೀ ಹೆಚ್.ಎನ್.ಶಂಕರ್‌ಲಿಂಗೇಗೌಡ: ಬಡವರಿಗೆ ಕೊಡತಕ್ಕ ಅಕ್ಕಿ, ಗೋಧಿ, ಸಕ್ಕರೆಯನ್ನು ಸರಿಯಾಗಿ ಕೊಡುತ್ತಿಲ್ಲ. ನೀವು 18-20 ರೂಪಾಯಿ ಅಕ್ಕಿ ಕೊಡುತ್ತೀರಾ? ನೀವು ಕೊಡತಕ್ಕದ್ದು ಏಳುರೂಪಾಯಿ ಅಕ್ಕಿ ಅದನ್ನು ನ್ಯಾಯವಾಗಿ ಕೊಡುವುದಿಲ್ಲವೆಂದರೆ ಏನು ಮಾಡಬೇಕು? ನೋಡಿ ಅಧ್ಯಕ್ಷರೇ, ಇವರು ಹೇಗೆ ಮಾಡುತ್ತಾರೆ?

ಅಧ್ಯಕ್ಷರು: ಮಾನ್ಯ ಶಂಕರಲಿಂಗೇಗೌಡರೇ, 'ನೋಡಿ ಅಧ್ಯಕ್ಷರೇ ಎಂದು ಕೈ ಮೇಲೆತ್ತಿದರೆ ನಾನು ಆಕಾಶದಲ್ಲಿ ನೋಡಲಾ'

ಶ್ರೀ ಆರ್.ರೋಷನ್ ಬೇಗ್: ಫೆಬ್ರವರಿ ತಿಂಗಳಿನಿಂದ ನಾವು ಆಗಲೇ ರೆಸ್ಪೋರ್ ಮಾಡಿದ್ದೇವೆ.

ಶ್ರೀ ಹೆಚ್.ಎನ್.ಶಂಕರಲಿಂಗೇಗೌಡ: ಸಣ್ಣಪುಟ್ಟ ನೌಕರರಿಂದ ಏನೂ ತೊಂದರೆಯಿಲ್ಲ. ರಾಜ್ಯದ ಬೊಕ್ಕಸ ಬರಿದಾಗುತ್ತಿರುವುದು ಅಧಿಕಾರಿಗಳಿಂದ.

ಅಧ್ಯಕ್ಷರು: ನಿಮಗೆ ಮಾನ್ಯ ಮುಖ್ಯಮಂತ್ರಿಗಳಲ್ಲಿರತಕ್ಕ ವಿಚಾರದ ಬಗ್ಗೆ ವಿಶ್ವಾಸ ತಂದಿದೆ ನಮಗೆ ಸಂತೋಷ. ಮುಂದಿನ ಪ್ರಶ್ನೆಗೆ ಹೋಗೋಣ.

ಶ್ರೀ ವಾಟಾಳ್ ನಾಗರಾಜ್: ಇದು ಪ್ರಾಮುಖ್ಯವಾದ ವಿಚಾರ. ಪೊಲೀಸ್ ಪೇದೆಗಳಿಗೆ ಕೊಡತಕ್ಕ ಪಡಿತರ ವ್ಯವಸ್ಥೆ ಬಗ್ಗೆ ಹೋದಸಲ ಒಂದು ಉತ್ತರ ಕೊಟ್ಟರು. ಈಗ ಈ ಸಭೆಯಲ್ಲಿ ಒಂದು ತರಹ ಉತ್ತರ ಕೊಡುತ್ತಿದ್ದಾರೆ. ಸ್ಪಷ್ಟವಾದ ನೀತಿಯನ್ನು ಸರ್ಕಾರ ದಯವಿಟ್ಟು ಹೇಳಬೇಕು. ಯಾವಾಗ ಕೊಡುತ್ತೀರಿ ಅದನ್ನು ದಯವಿಟ್ಟು ಹೇಳಿ.

ಅಧ್ಯಕ್ಷರು: ಪ್ರಾರಂಭ ಮಾಡಿದ್ದಾರೆ. ಫೆಬ್ರವರಿ ತಿಂಗಳಿನಿಂದ ರೆಸ್ಪೋರ್ ಮಾಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಅದು ಇನ್ನೂ ಬಂದಿಲ್ಲ. ಖಂಡಿತಾ ಅದು ಬಂದಿಲ್ಲ.

ಶ್ರೀ ಆರ್.ರೋಷನ್ ಬೇಗ್: ಫೆಬ್ರವರಿ ತಿಂಗಳಿನಲ್ಲಿ ಆದೇಶ ಮಾಡಿದ್ದೇವೆ.

ಶ್ರೀ ವಾಟಾಳ್‌ನಾಗರಾಜ್: ನಿಮ್ಮ ಆದೇಶ ಅದು ಇನ್ನೂ ಆದೇಶದ ರೂಪದಲ್ಲಿಯೇ ಇದೆ. ಅದಿನ್ನು ಕಾರ್ಯರೂಪಕ್ಕೆ ಬಂದಿಲ್ಲ.

ಅಧ್ಯಕ್ಷರು: ಫೆಬ್ರವರಿ ತಿಂಗಳ ಕಡೆಯಲ್ಲಿ ಆದೇಶ ಹೊರಡಿಸಿದ್ದಾರೆ. ನಾವು ಮಾರ್ಚಿ ಮೊದಲನೆಯ ವಾರ ಕಳೆದಿದ್ದೇವೆ. ಆದೇಶ ಹೋಗಿ ಬರುವುದಕ್ಕೆ ತಡವಾಗುತ್ತದೆ. ಅದು ಇನ್ನೊಂದು ವಾರದಲ್ಲಿ ಬರುತ್ತದೆ, ನೀವು ಕಾಳಜಿ ಮಾಡಬೇಡಿ.

ಕರಾವಳಿ ತೀರದಲ್ಲಿ ಸರ್ವೆ ಮಾಡಿರುವ ವಿಚಾರ

11 (131)

ಶ್ರೀ ಶಿವಾನಂದನಾಯ್ಕ (ಭಟ್ಕಳ): ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ಉತ್ತರ ಕನ್ನಡ ಜಿಲ್ಲೆಯ ಕರಾವಳಿಯ ಸಮುದ್ರ ತೀರದಲ್ಲಿ ಕಂದಾಯ ಇಲಾಖೆಯವರು ಸರ್ವೆ ಮಾಡಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ. ಈ ಸರ್ವೆ ಯಾವ ಕಾರಣಕ್ಕಾಗಿ ಮಾಡಲಾಗುತ್ತಿದೆ?

ಇ. ತೀರ ಪ್ರದೇಶದಲ್ಲಿ ವಾಸಿಸುವುವವರನ್ನು ಅಲ್ಲಿಂದ ಸ್ಥಳಾಂತರಿಸುವ ಯೋಜನೆ ಸರ್ಕಾರಕ್ಕೆ ಇದೆಯೇ?

ಶ್ರೀ ಜೆ.ಹೆಚ್.ಪಟೇಲ್ (ಮುಖ್ಯಮಂತ್ರಿಗಳು):

ಅ. ಬಂದಿದೆ.

ಆ. ಕರಾವಳಿ ತೀರದ ಸಿ.ಆರ್.ಝಡ್ ವಲಯದಲ್ಲಿ ಬರುವ ಪ್ರದೇಶಗಳ ''ಮ್ಯಾನೇಜ್‌ಮೆಂಟ್ ಪ್ಲ್ಯಾನ್'' ನಕಾಶೆಗಳನ್ನು ತಯಾರಿಸುವುದಕ್ಕಾಗಿ ಸ್ಥಳೀಯ ಮೋಜಣಿದಾರರಿಂದ ಸ್ಥಳ ಗುರುತಿಸಲಾಗಿದೆ. ಈ ಕೆಲಸವನ್ನು ಕೇಂದ್ರ:ರಾಜ್ಯ ಸರ್ಕಾರದ ಅರಣ್ಯ ಮತ್ತು ಜೀವಿಶಾಸ್ತ್ರ ಇಲಾಖೆಯ ನಿರ್ದೇಶನದ ಮೇರೆಗೆ ಕೈಗೊಳ್ಳಲಾಗಿದೆ.

ಇ. ಇಲ್ಲ.

ಶ್ರೀ ಶಿವಾನಂದ ನಾಯ್ಕ: ಮಾನ್ಯ ಅಧ್ಯಕ್ಷರೆ, ಮ್ಯಾನೇಜ್‌ಮೆಂಟ್ ಪ್ಲಾನ್ ಏ ತಯಾರು ಮಾಡುತ್ತಿದ್ದಾರೆ. ಆ ಭಾಗದ ಜನರನ್ನು ಎತ್ತಂಗಡಿ ಮಾಡಲಿಕ್ಕೆ ಹೊಸ ಕಟ್ಟಾ